I/599452/2024

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ

ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
(ಪ್ರಾದೇಶಿಕ), ಬೆಂಗಳೂರು,

Office the Conservator of Forests
(Territorial) Bangalore,

ಜಾರಕಬಂಡೆ ಅರಣ್ಯ ವಸತಿ ಸಂಕೀರ್ಣ,
ಕಮ್ಮಗೊಂಡನಹಳ್ಳಿ, ಬೆಂಗಳೂರು-560 015
Jarkabande Forest Quarters,
Kammagondanahalli, Bangalore-560015
ದೂರವಾಣಿ-080-23344686
Email ID – cfblr@aranya.gov.in

ಸಂಖ್ಯೆ: ಎ5/ಮುಅಸಂ(ಬೆಂ)/ಸಿಬ್ಬಂದಿ/ಸಿಆರ್-58/2023-24

E- Comp. No.:1373324

ದಿನಾಂಕ: 29-04-2024

KFD-BNGC0A5(EST)/2/2024-BANGALORE CIR-KARNATAKA FOREST DEPARTMENT

## ಅಧಿಕೃತ ಜ್ಞಾಪನಾ ಪತ್ರ

ವಿಷಯ: ಬೆಂಗಳೂರು ವೃತ್ತದ ಡಿ ಗ್ರೂಪ್ ನೌಕರರ ದಿನಾಂಕ: 10-12-2021 ರಿಂದ 31-12-2023 ರವರೆಗಿನ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ:
1. ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಾವಳಿ 1957 ರ ನಿಯಮ 10(1)
2. ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಎ5/ ಮುಅಸಂ(ಬೆಂ)/ಸಿಬ್ಬಂದಿ/ಸಿಆರ್-27/2020-21 ದಿನಾಂಕ: 15-05-2023
3. ಸರ್ಕಾರದ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ ಸಿಆಸುಇ 106 ಸೇಸೇನಿ 2021 ದಿನಾಂಕ: 10-12-2021
4. ಈ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಮ ಸಂಖ್ಯೆ ದಿನಾಂಕ: 30-03-2024

*_*_*

**ಪ್ರಸ್ತಾವನೆ:-**

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಬ್ಬಂದಿ ಮತ್ತು ನೇಮಕಾತಿ), ಅರಣ್ಯ ಭವನ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ದಿನಾಂಕ 05-02-2024 ರಂದು ನಡೆದ ಸಭೆಯಲ್ಲಿ ಗ್ರೂಪ್ ಡಿ ವೃಂದದ ಜೇಷ್ಠತಾ ಪಟ್ಟಿಗಳನ್ನು ದಿನಾಂಕ 31-12-2023 ರ ಅಂತ್ಯದವರೆಗೆ ಪ್ರಕಟಿಸಲು ಸೂಚಿಸಲಾಗಿರುತ್ತದೆ. ಉಲ್ಲೇಖ (2) ರ ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರದಲ್ಲಿ 'ಡಿ' ಗ್ರೂಪ್ ವೃಂದದ ದಿನಾಂಕ:01-01-2020 ರಿಂದ 09-12-2021 ರವರೆಗೆ ಜೇಷ್ಠತಾ ನಿಯಮಗಳನ್ವಯ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

ಮುಂದುವರೆದು ಉಲ್ಲೇಖ(3) ರ ಸರ್ಕಾರದ ಅಧಿಕೃತ ಜ್ಞಾಪನಾ ಪತ್ರದಲ್ಲಿ "ರಾಜ್ಯ ಸಿವಿಲ್ ಸೇವೆಗಳಲ್ಲಿನ ಯಾವುದೇ ವೃಂದದ ಹುದ್ದೆಗಳನ್ನು ಬಡ್ತಿ ಮಾಡಲು ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ಅನುಪಾತ/ಪ್ರತಿಶತ ಪ್ರಮಾಣವನ್ನು ನಿಗಧಿಪಡಿಸಿದ್ದಲ್ಲಿ, ನಿಗಧಿಪಡಿಸಿದ ಅನುಪಾತ/ಪ್ರತಿಶತದನ್ವಯ ಹುದ್ದೆ ಆಧಾರಿತವಾಗಿ ನೇರ ನೇಮಕಾತಿಗೆ ಮತ್ತು ಮುಂಬಡ್ತಿಗಾಗಿ ಒಟ್ಟು ಹುದ್ದೆಗಳನ್ನು ವರ್ಗೀಕರಣ ಮಾಡತಕ್ಕದ್ದು. ಈ ಉದ್ದೇಶಕ್ಕಾಗಿ ಆ ವೃಂದದ ಶಾಶ್ವತ ಹುದ್ದೆಗಳ ಜೊತೆಗೆ ತಾತ್ಕಲಿಕ ಹುದ್ದೆಗಳು ಸಹ ಒಳಗೊಂಡಿರುತ್ತದೆ. ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ಹುದ್ದೆಗಳನ್ನು ಮೇಲ್ಕಂಡಂತೆ ವರ್ಗೀಕರಿಸಿದ ನಂತರ ನೇಮಕಾತಿಗಾಗಿ ವರ್ಗೀಕರಿಸಿದ ಹುದ್ದೆಗಳನ್ನು ನೇರ ನೇಮಕಾತಿಯಿಂದಲೇ ಮತ್ತು ಮುಂಬಡ್ತಿಗಾಗಿ ವರ್ಗೀಕರಿಸಿದ ಹುದ್ದೆಗಳನ್ನು ಮುಂಬಡ್ತಿಯಿಂದ ಬಡ್ತಿ ಮಾಡತಕ್ಕದ್ದು" ಎಂದು ತಿಳಿಸಲಾಗಿದೆ. ಮುಂದುವರೆದು, ಸರ್ಕಾರದ ಅಧಿಕೃತ ಜ್ಞಾಪನಾ ಸಂಖ್ಯೆ: DPAR 48 SSR 75 ದಿನಾಂಕ 05-07-1976 ರಲ್ಲಿ ಬ್ಲಾಕ್ ಅವಧಿಯನ್ನು ವಿಂಗಡಿಸುವ ಕುರಿತು ಮಾರ್ಗ ಸೂಚಿಗಳನ್ನು ನಿಗಧಿಪಡಿಸಿದ್ದು, ಈ ಅಧಿಕೃತ ಜ್ಞಾಪನದ ಕಂಡಿಕೆ 3(c) ರಂತೆ ನೇರ ನೇಮಕಾತಿ ಮತ್ತು ಬಡ್ತಿಯ ನಡುವೆ ಅನುಪಾತವು ದಿನಾಂಕ 10-12-2021 ರ ಆದೇಶದಂತೆ ಬದಲಾವಣೆಗೊಂಡಿದ್ದರಿಂದ ಹಳೆಯ ಬ್ಲಾಕ್

I/599452/2024

ಅವಧಿಯನ್ನು ದಿನಾಂಕ 09-12-2021 ಕ್ಕೆ ಮುಕ್ತಾಯಗೊಳಿಸಿ, ದಿನಾಂಕ 10-12-2021 ರಿಂದ ಹೊಸ ಬ್ಲಾಕ್‌ನ್ನು ಪ್ರಾರಂಭಿಸಲಾಗಿರುತ್ತದೆ.

ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಾವಳಿ 1957 ರಂತೆ ಬೆಂಗಳೂರು ವೃತ್ತ ವ್ಯಾಪ್ತಿಗೆ ಒಳಪಡುವ 'ಡಿ' ಗ್ರೂಪ್ ನೌಕರರ ಕರಡು ಜೇಷ್ಠತಾಪಟ್ಟಿಯನ್ನು ದಿನಾಂಕ:10-12-2021 ರಿಂದ 31-12-2023 ಅಂತ್ಯದ ವರೆಗೆ ಉಲ್ಲೇಖ(4) ರಲ್ಲಿ ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರದಲ್ಲಿ ಕರಡು ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ, ಸದರಿ ಕರಡು ಜೇಷ್ಠತಾಪಟ್ಟಿಯ ಕುರಿತು 20-04-2024 ರವರೆವಿಗೆ ಅಕ್ಷೇಪಣೆಗಳನ್ನು ಸಲ್ಲಿಸಲು ಕಾಲವಕಾಶ ನೀಡಲಾಗಿತ್ತು. ಆದರೆ ಈ ಕರಡು ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಈ ಕಛೇರಿಯಲ್ಲಿ ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ ಸದರಿ ಜೇಷ್ಠತಾ ಪಟ್ಟಿಯಲ್ಲಿ ಯಾವುದೇ ಬದಲಾವಣೆ ಇಲ್ಲದೆ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಈ ಕೆಳಕಂಡ ಆದೇಶ.

**ಆದೇಶ**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಾವಳಿ 1957 ರ ನಿಯಮ 10 (i) ರನ್ವಯ ಬೆಂಗಳೂರು ವೃತ್ತ ವ್ಯಾಪ್ತಿಯ ವಿವಿಧ ವಿಭಾಗಳಲ್ಲಿ ದಿನಾಂಕ: 10-12-2021 ರಿಂದ 31-12-2023 ರವರೆಗಿನ ಅವಧಿಯಲ್ಲಿ ಪ್ರಸ್ತುತ ವೇತನ ಶ್ರೇಣಿ : 17000-400-18600-450-20400-500-22400-550-24600-600-27000-650-28950 ರಲ್ಲಿ ಉದ್ಭವವಾದ ಹುದ್ದೆಗಳ ವಿವರವನ್ನು ಅನುಬಂಧ-1 ರಲ್ಲಿ ಹಾಗೂ ಸದರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ / ನಿರ್ವಹಿಸಿರುವ (ಅರಣ್ಯ ವಿಶ್ರಾಂತಿ ಗೃಹಗಳ ಕೇರ್ ಟೇಕರ್ /ತಿಂಡಲ್/ ವಾರ್ಡ್‌ಬಾಯ್/ ಲಕ್ಷರ್/ ಫಮೇಲ್ ವಾರ್ಡ್ ಸರ್ವೆಂಟ್ / ಸ್ವೀಪರ್/ ಸ್ಕಾವೆಂಜರ್/ ಸ್ವೀಪರ್/ ಸ್ಕಾವೆಂಜರ್/ ಕೂಲಿ/ ಮಾಲಿ/ ದಲಾಯತ್/ ಗಾರ್ಡನರ್/ ಕ್ಲೀನರ್/ ವಾಚ್‌ಮಾನ್) ನೌಕರರ ಅಂತಿಮ ಜೇಷ್ಠತಾ ಪಟ್ಟಿಯನ್ನು ಅನುಬಂಧ-2 ರಲ್ಲಿ ಪ್ರಕಟಿಸಿದೆ.

SIVASANKAR SENGOTTUVEL
Digitally signed by SIVASANKAR SENGOTTUVEL
Date: 2024.04.29 18:35:19 +05'30'

ಅರಣ್ಯ ಸಂರಕ್ಷಣಾಧಿಕಾರಿ
(ಪ್ರಾದೇಶಿಕ),ಬೆಂಗಳೂರು.

ಪ್ರತಿಯನ್ನು:

1. ಗೌರವಗಳೊಂದಿಗೆ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯಪಡೆ ಮುಖ್ಯಸ್ಥರು) ಅರಣ್ಯ ಭವನ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬೆಂಗಳೂರು ನಗರ/ಬೆಂಗಳೂರು ಗ್ರಾಮಾಂತರ/ರಾಮನಗರ/ ಕೋಲಾರ/ಚಿಕ್ಕಬಳ್ಳಾಪುರ/ಬೆಂಗಳೂರು ನಗರ ಸಾಮಾಜಿಕ/ ಬೆಂಗಳೂರು ಗ್ರಾಮಾಂತರ ಸಾಮಾಜಿಕ/ ರಾಮನಗರ ಸಾಮಾಜಿಕ/ಕೋಲಾರ ಸಾಮಾಜಿಕ/ಚಿಕ್ಕಬಳ್ಳಾಪುರ ಸಾಮಾಜಿಕ ಅರಣ್ಯ ವಿಭಾಗಗಳು ಮತ್ತು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಬೆಂಗಳೂರು ಇವರುಗಳಿಗೆ ಕಳುಹಿಸಿದೆ.
3. ಸಂಬಂಧಿಸಿದ ನೌಕರರಿಗೆ ನಿಯಂತ್ರಣಾಧಿಗಳ ಮುಖಾಂತರ ಕಳುಹಿಸಿದೆ.
4. ಕಚೇರಿ ಕಡತಕ್ಕೆ

I/599452/2024

## ಅನುಬಂಧ-1

**ದಿನಾಂಕ**: 10-12-2021 **ರಿಂದ** 31-12-2023 **ರವರೆಗೆ ಗ್ರೂಪ್ 'ಡಿ' ವೃಂದದ ಪ್ರಸ್ತುತ ವೇತನ ಶ್ರೇಣಿ** : 17000-400-18600-450-20400-500-22400-550-24600-600-27000-650-28950 (**ಅರಣ್ಯ ವಿಶ್ರಾಂತಿ ಗೃಹಗಳ ಕೇರ್ ಟೇಕರ್/ತಿಂಡಲ್/ವಾರ್ಡ್ ಬಾಯ್/ಲಕ್ಷರ್/ಫಿಮೇಲ್ ವಾರ್ಡ್ ಸರ್ವೆಂಟ್ / ಸ್ವೀಪರ್/ಸ್ಕಾವೆಂಜರ್/ಸ್ವೀಪರ್/ಸ್ಕಾವೆಂಜರ್/ಕೂಲಿ/ ಮಾಲಿ/ದಲಾಯತ್/ಗಾರ್ಡನರ್/ಕ್ಲೀನರ್/ವಾಚ್‌ಮಾನ್) ರಲ್ಲಿ ಕಾರ್ಯನಿರ್ವಹಿಸುತ್ತಿರುವ /ನಿರ್ವಹಿಸಿರುವ ನೌಕರರ ಅಂತಿಮ ಜೇಷ್ಠತಾ ಪಟ್ಟಿ**

| ಕ್ರ.ಸಂ | ಬ್ಲಾಕ್ ಅವಧಿ | ಬ್ಲಾಕ್ ಅವಧಿಯಲ್ಲಿ ಉದ್ಭವಾದ ರಿಕ್ತಸ್ಥಾನಗಳು | ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗಧಿ ಪಡಿಸಲಾದ ಕೋಟಾ | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇರ ಸೇಮಕಾತಿಗೆ ಮತ್ತು ಮುಂಬಡ್ತಿಗೆ ವರ್ಗೀಕರಿಸಲಾದ ಹುದ್ದೆಗಳ ಸಂಖ್ಯೆ | | ವಾಸ್ತವವಾಗಿ ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ | | ಹೆಚ್ಚುವರಿ (+) ಕೊರತೆ (–) | | ವಾಸ್ತವವಾಗಿ ಲಭ್ಯವಾಗುವ ಖಾಲಿ ಹುದ್ದೆಗಳ ಸಂಖ್ಯೆ | | ಷರಾ |
|---|---|---|---|---|---|---|---|---|---|---|---|---|
| | | | | ನೇ ನೇ | ಮುಂ | ನೇ ನೇ | ಮುಂ | ನೇ ನೇ | ಮುಂ | ನೇ ನೇ | ಮುಂ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| | **ಸರ್ಕಾರದ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ :ಸಿಆಸುಇ 106 ಸೇನನಿ 2021, ದಿನಾಂಕ 10-12-2021 ರ ಕಂಡಿಕೆ 5(1) ರ ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ಹುದ್ದೆಗಳನ್ನು ವರ್ಗೀಕರಿಸಿದ ನಂತರ ನೇರ ನೇಮಕಾತಿಗಾಗಿ ವರ್ಗೀಕರಿಸಿದ ಹುದೆಗಳನ್ನು ನೇರ ನೇಮಕಾತಿಯಿಂದಲೇ ಮತ್ತು ಮುಂಬಡ್ತಿಗಾಗಿ ವರ್ಗೀಕರಿಸಲಾದ ಹುದ್ದೆಗಳನ್ನುಮುಂಬಡ್ತಿಯಿಂದಲೇ ಭರ್ತಿಮಾಡತಕ್ಕದ್ದು.**<br><br>**ಅಲ್ಲದೇ ಕಂಡಿಕೆ 5(3) ರಲ್ಲಿ ಈ ಅಧಿಕೃತ ಜ್ಞಾಪನಾವು ಭವಿಷ್ಯವರ್ತಿಯಾಗಿ ಜಾರಿಗೆ ಬರುತ್ತದೆ ಎಂದು ಹಾಗೂ ಅದರ ಪೂರ್ವದಲ್ಲಿ ನೇರ ನೇಮಕಾತಿಯಾಗಲಿ ಅಥವಾ ಮುಂಬಡ್ತಿಗಾಗಿಯಾಗಲಿ ನಿರ್ಧರಿಸಲಾದ ಆ ರಿಕ್ತಸ್ಥಾನಗಳ ವರ್ಗೀಕರಣವು ಅವುಗಳನ್ನು ಇದುವರೆಗು ಭರ್ತಿ ಮಾಡದೇ ಇದ್ದಲ್ಲಿ ತತ್‌ಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳ್ಳುತ್ತದೆ ಎಂದು ತಿಳಿಸಲಾಗಿರುತ್ತದೆ.** | | | | | | | | | | | |
| **ಸರ್ಕಾರದ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಸಿಅಸುಇ 106 ಸೆನೆನಿ 2021 ದಿನಾಂಕ: 10-12-2021 ರನ್ವಯ ರಿಕ್ತ ಸ್ಥಾನದ ಆಧಾರದ ವರ್ಗೀಕರಣದ ಬದಲಾಗಿ ಹುದ್ದೆ ಆಧಾರಿತ ವರ್ಗೀಕರಣವನ್ನು ಅನುಸರಿಸುವ ಬಗ್ಗೆ** | | | | | | | | | | | | |
| | As on 10-12-2021 | 95 (ಹಿಂದಿನ ಅವಧಿಯಲ್ಲಿ ಲಭ್ಯವಿರುವ ಹುದ್ದೆಗಳು) | DR | (DR-PR) 100:0 | | 57 (ಭರ್ತಿಯಾದ ಹುದ್ದೆ) | 0 | -38 | 0 | '-38 ಖಾಲಿ ಇರುವ ಹುದ್ದೆಗಳು | 0 | ಹಿಂದಿನ ಅವಧಿಯಿಂದ ಖಾಲಿಯಾಗಿ ಮುಂದೊಯ್ದ 38 ಹುದ್ದೆಗಳು |
| 1 | 10-12-2021 ರಿಂದ 31-12-2023 ರವರೆಗೆ | 14 | | 0 | 0 | 4 | 0 | -10 | 0 | -48 | 0 | 14 ನೇರ (ನಿವೃತ್ತಿ-11 , ಮುಂಬಡ್ತಿ-1, ವೃತ್ತ ಬದಲಾವಣೆ-1, ನಿಧನ-1) |

SIVASANKAR SENGOTTUVEL

Digitally signed by SIVASANKAR SENGOTTUVEL
Date: 2024.04.29 18:35:42 +05'30'

**ಅರಣ್ಯ ಸಂರಕ್ಷಣಾಧಿಕಾರಿ**
**(ಪ್ರಾದೇಶಿಕ), ಬೆಂಗಳೂರು**

I/599452/2024

# ಅನುಬಂಧ-2

## ದಿನಾಂಕ: 10-12-2021 ರಿಂದ 31.12.2023 ರ ಅಂತ್ಯಕ್ಕೆ ಬೆಂಗಳೂರು ವೃತ್ತದ ಗ್ರೂಪ್ 'ಡಿ' ವೃಂದದ ಪ್ರಸ್ತುತ ವೇತನ ಶ್ರೇಣಿ : 17000-400-18600-450-20400-500-22400-550-24600-600-27000-650-28950 (ಅರಣ್ಯ ವಿಶ್ರಾಂತಿ ಗೃಹಗಳ ಕೇರ್ ಟೇಕರ್/ತಿಂಡಲ್/ವಾರ್ಡ್ ಬಾಯ್/ಲಕ್ಷರ್/ಫಮೇಲ್ ವಾರ್ಡ್ ಸರ್ವೆಂಟ್ / ಸ್ವೀಪರ್/ಸ್ಕಾವೆಂಜರ್/ಸ್ವೀಪರ್/ಸ್ಕಾವೆಂಜರ್/ಕೂಲಿ/ಮಾಲಿ/ದಲಾಯತ್/ಗಾರ್ಡನರ್/ಕ್ಲೀನರ್/ವಾಚ್‌ಮಾನ್) ರಲ್ಲಿ ಕಾರ್ಯನಿರ್ವಹಿಸುತ್ತಿರುವ /ನಿರ್ವಹಿಸಿರುವ ನೌಕರರ ಅಂತಿಮ ಜೇಷ್ಠತಾ ಪಟ್ಟಿ

| ಕ್ರ. ಸಂ. | ನೌಕರರ ಹೆಸರು ಶ್ರೀ/ಶ್ರೀಮತಿ | ಮೀಸಲಾತಿ ವರ್ಗ | ನೇರ ನೇಮಕಾತಿ/ ಮುಂಬಡ್ತಿ/ಇತರೆ | ಜನ್ಮ ದಿನಾಂಕ | ಸರ್ಕಾರಿ ಸೇವೆಗೆ ಸೇರಿದ ದಿನಾಂಕ | ಅರ್ಹತಾ ದಿನಾಂಕ | ಷರಾ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 97 | ರಾಕೇಶ್ ವಿ | | ಅನುಕಂಪ | 23-12-1993 | 18-04-2023 | 18-04-2023 | |
| 98 | ರಾಜು ಎಂ | | ಅನುಕಂಪ | 21-07-1988 | 21-07-2023 | 21-07-2023 | |
| 99 | ಶಾಂತಮ್ಮ | ಪ.ಜಾ | ಅನುಕಂಪ | 15-04-1968 | 09-07-2014 | 07-10-2023 | ಪ್ರ.ಮು.ಅ.ಸಂ ರವರ ಕಛೇರಿಯ ಆದೇಶ ಸಂಖ್ಯೆ:07/2023-24 ದಿನಾಂಕ: 13-09-2023 ರ ಆದೇಶದಂತೆ ಸದರಿರವರು ಮು.ಅ.ಸಂ ಮೈಸೂರು (ಕಾಯೋ) ರವರ ಕಛೇರಿಯಿಂದ ವರ್ಗಾವಣೆ ಹೊಂದಿ ಬೆಂಗಳೂರು ವೃತ್ತ ವ್ಯಾಪ್ತಿಗೆ ಒಳಪಡುವ ಸಂಶೋಧನಾ ವಲಯ, ಮಂಡ್ಯ ಇಲ್ಲಿ ದಿನಾಂಕ: 07-10-2023 ರಂದು ಕಾರ್ಯ ವರದಿ ಮಾಡಿಕೊಂಡಿರುತ್ತಾರೆ. ಹಾಗಾಗಿ ಜೇಷ್ಠತಾ ನಿಯಮಾವಳಿ 1957 ರ ನಿಯಮ 6 ರನ್ವಯ ಸದರಿ ರವರಿಗೆ ಅರ್ಹತಾ ದಿನಾಂಕವನ್ನು ನಿಗಧಿಪಡಿಸಿದೆ. |
| 100 | ಎಸ್.ಮಂಜುಳ | | ಅನುಕಂಪ | 02-03-1979 | 06-12-2023 | 06-12-2023 | |

SIVASANKAR SENGOTTUVEL
Digitally signed by SIVASANKAR SENGOTTUVEL
Date: 2024.04.29 18:35:57 +05'30'

**ಅರಣ್ಯ ಸಂರಕ್ಷಣಾಧಿಕಾರಿ**
**(ಪ್ರಾದೇಶಿಕ), ಬೆಂಗಳೂರು**